ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ದಿಃ **25-07-2022**

**DW-1**

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಃ ಶ್ರೀ ಎಸ್ ಕೆ ಎನ್ ವಕೀಲರ ಪರವಾಗಿ ಶ್ರೀ ಎಮ್ ಎಸ್ ಕೆ ವಕೀಲರಿಂದಃ

ಪ್ರತಿವಾದಿ ಹಾಜರಿರುತ್ತೇನೆ. ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದನ್ನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆಸಿರುವ ಎಲ್ಲಾ ವಿಷಯಗಳು ಸತ್ಯ ಮತ್ತು ಸರಿ ಇದ್ದು, ಅವುಗಳನ್ನು ಓದಿ ತಿಳಿದುಕೊಂಡು ಸರಿ ಇದೆ ಎಂದು ತಿಳಿದು ಸರಿ ಮಾಡಿರುತ್ತೇನೆ ಎಂದು ಪ್ರಮಾಣೀಕರಿಸಿರುತ್ತಾರೆ. ಡಿಡಬ್ಲ್ಯೂ-1 ಎಂದು ವಿಚಾರಿಸಲಾಯಿತು.

2. ಸಾಕ್ಷಿಯು ನಿಟ್ಟೆ ಗ್ರಾಮದ ಸ.ನಂಃ 61 ರ ಅಕ್ರಮ ಸಕ್ರಮಕ್ಕಾಗಿ ಸಲ್ಲಿಸಿದ ಅರ್ಜಿಗೆ ಕಂದಾಯ ಇಲಾಖೆಯವರು ದಿಃ 18-06-2014 ರಂದು ಮತ್ತು ದಿಃ 04-06-2016 ರಂದು ನೀಡಿದದಿ ಸ್ವೀಕೃತಿಯ ಅಂತರ್ಜಾಲದಿಂದ ಪಡೆದ ಪ್ರತಿಗಳನ್ನು ಹಾಜರುಪಡಿಸಿದ್ದು, ಅದನ್ನು ಗುರುತಿಸಲು ವಾದಿ ಪರ ವಕೀಲರು ಅವುಗಳ ಮೂಲ ಪ್ರತಿ ಇರುವುದಿಲ್ಲ ಎಂದು ತಕರಾರು ಮಾಡಿದ್ದು, ತಕರಾರಿಗ ಒಳಪಟ್ಟು ನಿಡಿ-3 ಮತ್ತು 4 ಎಂದು ಗುರುತಿಸಲಾಯಿತು.

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದಿಃ 01-04-2009, 25-03-2011, 31-03-2016, 09-03-2017, 08-02-2018, 03-09-2020, 04-02-2021 ರ ತೆರಿಗೆ ಸ್ವೀಕೃತಿ ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಡಿ-5 ರಿಂದ 11 ಎಂದು ಗುರುತಿಸಲಾಯಿತು.

ಮನೆ ನಂಃ 3/256 ಕ್ಕೆ ಸಂಬಂಧಿಸಿದಂತೆ ನಿಟ್ಟ ಗ್ರಾಮ ಪಂಚಾಯತಿಯವರು ದಿಃ 13-10-202009 ರಂದು ನೀಡಿದ ದೃಢಪತ್ರವನ್ನು ನೀಡಿದ್ದು, ಅದನ್ನು ನಿಡಿ-12 ಎಂದು ಗುರುತಿಸಲಾಯಿತು.

ಸಾಕ್ಷಿಯು ಕುಟುಂಬ ಪಡಿತರ ಚೀಟಿಯ ಮೂಲ ಪ್ರತಿ ಮತ್ತು ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ವಾಪಾಸ್ಸು ನೀಡಿ ದೃಢೀಕೃತ ಪ್ರತಿಯನ್ನು ನಿಡಿ-13 ಎಂದು ಗುರುತಿಸಲಾಯಿತು.

ಸಾಕ್ಷಿಯು ತನ್ನ ಆದಾರ್ ಕಾರ್ಡಿನ ಮೂಲ ಪ್ರತಿ ಮತ್ತು ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ವಾಪಾಸ್ಸು ನೀಡಿ ದೃಢೀಕೃತ ಪ್ರತಿಯನ್ನು ನಿಡಿ-14 ಎಂದು ಗುರುತಿಸಲಾಯಿತು.

ಸಾಕ್ಷಿಯು ತನ್ನ ಗಂಡನ ಆಧಾರ್ ಕಾರ್ಡಿನ ಮೂಲ ಪ್ರತಿ ಮತ್ತು ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ವಾಪಾಸ್ಸು ನೀಡಿ ದೃಢೀಕೃತ ಪ್ರತಿಯನ್ನು ನಿಡಿ-15 ಎಂದು ಗುರುತಿಸಲಾಯಿತು.

ಸಾಕ್ಷಿಯು ತನ್ನ ಮಗ ಪ್ರಶಾಂತ್‌ನ ಆಧಾರ್ ಕಾರ್ಡಿನ ಮೂಲ ಪ್ರತಿ ಮತ್ತು ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ವಾಪಾಸ್ಸು ನೀಡಿ ದೃಢೀಕೃತ ಪ್ರತಿಯನ್ನು ನಿಡಿ-16 ಎಂದು ಗುರುತಿಸಲಾಯಿತು.

ಸಾಕ್ಷಿಯು ತನ್ನ ಮಗ ಪ್ರಜ್ವಲ್‌ನ ಆಧಾರ್ ಕಾರ್ಡಿನ ಮೂಲ ಪ್ರತಿ ಮತ್ತು ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದರ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ವಾಪಾಸ್ಸು ನೀಡಿ ದೃಢೀಕೃತ ಪ್ರತಿಯನ್ನು ನಿಡಿ-17 ಎಂದು ಗುರುತಿಸಲಾಯಿತು.

ಸಾಕ್ಷಿಯು ಸ.ನಂಃ 360 ರ ನಕ್ಷೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-18 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u> ವಾದಿ ಪರಃ ಶ್ರೀ ಎಮ್ ಕೆ ವಿ ಕೆ ವಕೀಲರ ಪರವಾಗಿ ಪಿ ಡಿ ಜೆ ವಕೀಲರು ಸಮಯವನ್ನು ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ., ಕಾರ್ಕಳ